ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 ದಿನಾಂಕ: 03–03–2017

## ಪತ್ರಿಕಾ ಆಮಂತ್ರಣ

1. **"ಭಾರತ ಭಾಗ್ಯ ವಿಧಾತ" ಧ್ವನಿ–ಬೆಳಕು; ದೃಶ್ಯ ವೈಭವಗಳ ರೂಪಕ ವಿಶೇಷ ಪ್ರದರ್ಶನ:**

   **ದಿನಾಂಕ: 04–03–2017 ಶನಿವಾರ, ಸಂಜೆ 6.30 ಗಂಟೆಗೆ**

   **ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ಬಸವೇಶ್ವರನಗರ, ಬೆಂಗಳೂರು**

   **ಕಾರ್ಯಕ್ರಮದ ಮುನ್ನಾ ಪತ್ರಿಕಾಗೋಷ್ಠಿ: ಶ್ರೀ ಎನ್.ಆರ್. ವಿಶುಕುಮಾರ್, ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ದಿನಾಂಕ: 04–03–2017 ಶನಿವಾರ, ಸಂಜೆ 6.00 ಗಂಟೆಗೆ, ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ಬಸವೇಶ್ವರನಗರ, ಬೆಂಗಳೂರು**

## ಪತ್ರಿಕಾ ಪ್ರಕಟಣೆ

# "ಭಾರತ ಭಾಗ್ಯ ವಿಧಾತ"
# ಧ್ವನಿ–ಬೆಳಕು; ದೃಶ್ಯ ವೈಭವಗಳ ರೂಪಕ ಸಮಾರೋಪ ಸಮಾರಂಭ

**ಬೆಂಗಳೂರು, ಮಾರ್ಚ್ 3 , (ಕರ್ನಾಟಕ ವಾರ್ತೆ)**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಮ್ಮಿಕೊಂಡಿದ್ದ ಡಾ: ಬಿ.ಆರ್. ಅಂಬೇಡ್ಕರ್ 125ನೇ ಜಯಂತಿ ವರ್ಷಾಚರಣೆಯ ವಿಶೇಷ ಕಾರ್ಯಕ್ರಮ ಭಾರತ ಭಾಗ್ಯ ವಿಧಾತ ಸಮಾರೋಪ ಸಮಾರಂಭವನ್ನು ಮಾರ್ಚ್ 5 ರಂದು ಸಂಜೆ 6.30 ಗಂಟೆಗೆ ಬೆಂಗಳೂರಿನಲ್ಲಿ ಬಸವೇಶ್ವರ ನಗರದ ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್‌ನ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಫೆಬ್ರವರಿ 1 ರಂದು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಆರಂಭಗೊಂಡ ಕಾರ್ಯಕ್ರಮವು ಒಂದು ತಿಂಗಳಕಾಲ ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿ ಯಶಸ್ವಿ ಪ್ರದರ್ಶನ ಕಂಡು ಜನ ಮನ್ನಣೆ ಗಳಿಸಿದೆ. ಜನರ ಒತ್ತಾಯದ ಮೇರೆಗೆ ಸಮಾರೋಪಕ್ಕೂ ಮುನ್ನ ಮಾರ್ಚ್ 4 ರಂದು ಸಹ ವಿಶೇಷ ಪ್ರದರ್ಶನವನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ, ಒಟ್ಟು ಎರಡು ದಿನಗಳ ಕಾಲ ಒಂದೇ ವೇದಿಕೆಯಲ್ಲಿ ನಡೆಯಲಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಶ್ರೀ ಎನ್.ಆರ್. ವಿಶುಕುಮಾರ್ ಅವರು ತಿಳಿಸಿದ್ದಾರೆ.

ಮಾರ್ಚ್ 5 ರಂದು ಸಂಜೆ 6.30 ಗಂಟೆ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ.

ಈ ಸಮಾರಂಭದಲ್ಲಿ ಬೆಂಗಳೂರು ಅಭಿವೃದ್ಧಿ, ಯೋಜನೆ ಮತ್ತು ಸಾಂಖ್ಯಿಕ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ, ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್, ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವೆ ಶ್ರೀಮತಿ ಉಮಾಶ್ರೀ, ಕೃಷಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ, ವಸತಿ ಸಚಿವ ಎಂ. ಕೃಷ್ಣಪ್ಪ, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ, ಲೋಕಸಭಾ ಸದಸ್ಯ ಪಿ.ಸಿ. ಮೋಹನ್, ವಿಧಾನಸಭಾ ಸದಸ್ಯ ಪ್ರಿಯಾ ಕೃಷ್ಣ, ಬಿ.ಬಿ.ಎಂ.ಪಿ. ಸದಸ್ಯ ರೂಪಾ ಆರ್ ಹಾಗೂ ಶ್ರೀಮತಿ ಉಮಾವತಿ ಪದ್ಮರಾಜ್ ಅವರು ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮ ಕುರಿತು:

ಕರ್ನಾಟಕ ಸರ್ಕಾರ ಆಚರಿಸುತ್ತಿರುವ ಸಂವಿಧಾನ ಶಿಲ್ಪಿ ಡಾ: ಬಿ.ಆರ್. ಅಂಬೇಡ್ಕರ್ ಅವರ 125 ನೇ ಜನ್ಮದಿನಾಚರಣೆಯ (14 ಏಪ್ರಿಲ್ 1891) ವರ್ಷಾಚರಣೆ (14 ಏಪ್ರಿಲ್ 2016 ರಿಂದ 14 ಏಪ್ರಿಲ್ 2017) ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಮ್ಮಿಕೊಂಡಿರುವ ಅಂಬೇಡ್ಕರ್ ಅವರ ಜೀವನ ಸಾಧನೆಗಳನ್ನು ಬಿಂಬಿಸುವ ವಿನೂತನ ಧ್ವನಿ–ಬೆಳಕು 'ಭಾರತ ಭಾಗ್ಯ ವಿಧಾತ' ಕಾರ್ಯಕ್ರಮ.

2017 ಫೆಬ್ರವರಿ 1 ರಂದು ಬೆಂಗಳೂರಿನಲ್ಲಿ ಆರಂಭಗೊಂಡು ನಂತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಮಾರ್ಚ್ 3 ರ ವರೆಗೆ ಒಂದು ತಿಂಗಳ ಕಾಲ ಜರುಗಿದೆ.

"ಭಾರತ ಭಾಗ್ಯ ವಿಧಾತ" – ಇದು ಭಾರತದ ತಳ ಸಮುದಾಯಗಳ ಆತ್ಮಸ್ಥೈರ್ಯವನ್ನು ನೂರ್ಮಡಿಗೊಳಿಸಿದ ಮಹಾ ಚೇತನದ ಜೀವನ ಚರಿತೆ. ನೊಂದವರ ನೋವಿಗೆ ದನಿಯಾಗಿ ನಿಂತ ಧೀಮಂತ ನಾಯಕನ ಆತ್ಮಕತೆ. ತನ್ನ ಪ್ರತಿಭೆ, ಪರಿಶ್ರಮಗಳಿಂದ ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಪದವಿ ಪುರಸ್ಕಾರಗಳಿಸಿದ ಆರ್ಥಿಕ ತಜ್ಞನ ಯಶೋಗಾಥೆ. ಭಾರತ ಸಂವಿಧಾನದ ಶಿಲ್ಪಿಯೆಂದೇ ಖ್ಯಾತರಾದ ಮಹಾ ಮಾನವತಾವಾದಿಯ ಜೀವಗಾಥೆ.

ಡಾ.ಬಿ.ಆರ್. ಅಂಬೇಡ್ಕರ್ ಒಂದು ಜಗತ್ತು ಇದ್ದಂತೆ, ಅವರೊಬ್ಬ ಸಮಾಜ ಸುಧಾರಕ, ಆರ್ಥಿಕ ತಜ್ಞ, ಶಿಕ್ಷಣ ತಜ್ಞ, ರಾಜಕೀಯ ವಿಶ್ಲೇಷಕ, ಅಧ್ಯಾಪಕ, ಹೋರಾಟಗಾರ, ಭಾರತ ಸಂವಿಧಾನ ಶಿಲ್ಪಿ ಹೀಗೆ ಹತ್ತು ಹಲವಾರು ಪ್ರತಿಭೆಗಳ ಮೇರು ಶಿಖರ. ಅವರ ಬಹುಮುಖ ಪ್ರತಿಭೆಗಳನ್ನು ಪಟ್ಟಿ ಮಾಡುತ್ತಾ ಹೋದರೆ ಬಹುಶಃ ಜಗತ್ತಿನಲ್ಲಿ ಅವರಂತ ಬಹುಮುಖಿ ಜ್ಞಾನಿ ಇನ್ನೊಬ್ಬರಿಲ್ಲ ಎನಿಸುತ್ತದೆ.

ಇಂತಹ ಬಹುಮುಖಿ ಜ್ಞಾನಿಯನ್ನು ಒಂದೂವರೆ ಗಂಟೆಯ ಈ ರೂಪಕದಲ್ಲಿ ಹಿಡಿದಿಡಲು ಮತ್ತು ಒಟ್ಟಾರೆ ರೂಪಕದಲ್ಲಿ ಯಾವ ಯಾವ ಅಂಶಗಳನ್ನು ಪರಿಗಣಿಸಬೇಕು ಹಾಗೂ ಯಾವುದೇ ವಿಷಯದಲ್ಲಿ ಚ್ಯುತಿ ಕಾಣಿಸದಂತೆ ರೂಪಿಸುವಲ್ಲಿ ರಾಜ್ಯ ಸರ್ಕಾರ ಮೊದಲು ಅಂಬೇಡ್ಕರ್ ಬಗ್ಗೆ ಅಧ್ಯಯನ ಮಾಡಿರುವ ಮತ್ತು ಅಪಾರ ಜ್ಞಾನವಿರುವ ಪರಿಣಿತ ಸಲಹಾ ಸಮಿತಿಯನ್ನು ರಚಿಸಿತ್ತು.

ಅದರಲ್ಲಿ ದಲಿತ ಕವಿ ಡಾ: ಸಿದ್ಧಲಿಂಗಯ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಹಾಗೂ ಸಾಹಿತಿ ಎಲ್. ಹನುಮಂತಯ್ಯ, ಸಾಹಿತಿ ಶ್ರೀಮತಿ ಬಿ.ಟಿ.ಜಾಹ್ನವಿ, ಅಂಬೇಡ್ಕರ್ ಪ್ರಶಸ್ತಿ ವಿಜೇತ ಚಿನ್ನಸ್ವಾಮಿ, ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ.ಎಸ್.ನರೇಂದ್ರ ಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕರುಗಳು ಮತ್ತು ಕ್ಷೇತ್ರ ಪ್ರಚಾರ ಶಾಖೆಯ ಜಂಟಿ ನಿರ್ದೇಶಕರು ಸದಸ್ಯರಾಗಿದ್ದರು.

ಇದರನಂತರದ ಹಂತದಲ್ಲಿ ಮನರಂಜನೆ ಮತ್ತು ಸಾಂಸ್ಕೃತಿಕ ಹಾಗೂ ಸಂಗೀತದ ಗುಣಮಟ್ಟವನ್ನು ಕಾಯ್ದುಕೊಳ್ಳಲು ವಾರ್ತಾ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಸಲಹಾ ಸಮಿತಿಯನ್ನು ರಚಿಸಲಾಗಿತ್ತು. ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ, ರಾಷ್ಟ್ರೀಯ ನಾಟಕ ಶಾಲೆಯ ಬೆಂಗಳೂರು ಶಾಖೆಯ ಮುಖ್ಯಸ್ಥ ಸಿ.ಬಸವಲಿಂಗಯ್ಯ ಮತ್ತು ಪ್ರಾಧ್ಯಾಪಕ ಹಾಗೂ ಸಾಹಿತಿ ಕೆ. ವೈ. ನಾರಾಯಣಸ್ವಾಮಿಯವರು ಈ ಸಮಿತಿಯಲ್ಲಿದ್ದು ಕಾರ್ಯಕ್ರಮದ ಪ್ರಾರಂಭದಿಂದ ಪ್ರತಿ ದಿನ ಅಭ್ಯಾಸ ಸಮಯದಲ್ಲಿ ಸ್ಥಳದಲ್ಲೇ ಇದ್ದು ತಮ್ಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್ ಅವರ ಪರಿಕಲ್ಪನೆಯ ಈ ಕಾರ್ಯಕ್ರಮಕ್ಕೆ ನಿರ್ದೇಶನ ಮತ್ತು ಸಾಹಿತ್ಯವನ್ನು ಖ್ಯಾತ ಚಲನಚಿತ್ರ ನಿರ್ದೇಶಕ ಬಿ.ಎಂ. ಗಿರಿರಾಜ್, ಸಂಗೀತ ಪೂರ್ಣಚಂದ್ರ ತೇಜಸ್ವಿ, ರಂಗ ವಿನ್ಯಾಸ ಶಶಿಧರ ಅಡಪ, ವಸ್ತ್ರಾಲಂಕಾರ ಪ್ರಮೋದ್ ಶಿಗ್ಗಾವ್, ಪದ್ಮಿನಿ ಹಚ್ಚಿ ನೃತ್ಯ

ನಿರ್ದೇಶನ, ರಾಮಕೃಷ್ಣ ಬೆಳ್ತೂರು ಮೇಕಪ್ ಹಾಗೂ ಡಾ: ಕೆ.ವೈ. ನಾರಾಯಣಸ್ವಾಮಿ ಅವರು ಗೀತ ರಚನೆ ಮಾಡಿದ್ದಾರೆ.

"ಕಣ್ತುಂಬಿಸುವ ಬೆಳಕಿನ ಲೋಕ, ಕಿವಿದುಂಬಿಸುವ ಹಿನ್ನೆಲೆ ಸಂಗೀತದೊಂದಿಗೆ ವೈಚಾರಿಕತೆಯ ಹಿನ್ನೋಟ" ಅಡಿಬರಹದಲ್ಲಿ ರೂಪುಗೊಂಡಿರುವ ಈ ವಿಶೇಷ ಕಾರ್ಯಕ್ರಮ ಮೊದಲ ಪ್ರದರ್ಶನ ಕಂಡಿದ್ದು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಕರ್ನಾಟಕ ಕಲಾಗ್ರಾಮದಲ್ಲಿ. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ವೇದಿಕೆಗಳಲ್ಲಿ ಪ್ರದರ್ಶನ ಕಂಡಿದ್ದು ಸರಾಸರಿ 5000 ಜನ ವೀಕ್ಷಿಸಿದ್ದಾರೆ. ಸ್ಥಳೀಯ ಜನಪ್ರತಿನಿಧಿಗಳ ಮೆಚ್ಚುಗೆಗಳಿಸಿ ಹಲವು ಸ್ಥಳಗಳಲ್ಲಿ ಕಲಾವಿದರುಗಳು ಬಹುಮಾನಗಳನ್ನು ಪಡೆದಿದ್ದಾರೆ. ಪ್ರತಿ ಜಿಲ್ಲೆಯಲ್ಲಿ ಕಾರ್ಯಕ್ರಮದ ನಂತರ ಪ್ರೇಕ್ಷಕರ ಒಕ್ಕೊರಲಿನ ಒಂದೇ ಬೇಡಿಕೆ ಮತ್ತೊಮ್ಮೆ ಪ್ರದರ್ಶನ ಹಮ್ಮಿಕೊಳ್ಳಲು ಒತ್ತಾಯ ಮಾಡಿದ್ದಾರೆ.

ವಾರ್ತಾ ಇಲಾಖೆ ಈಗಾಗಲೇ "ಮನುಷ್ಯ ಜಾತಿ ತಾನೊಂದೆ ವಲಂ" ಧ್ವನಿ ಬೆಳಕು ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಮ್ಮಿಕೊಂಡಿದ್ದ ಅನುಭವದ ಮೇಲೆ ಡಾ: ಬಿ.ಆರ್. ಅಂಬೇಡ್ಕರ್ ಕುರಿತು ಮಾಡಿರುವ 'ಭಾರತ ಭಾಗ್ಯ ವಿಧಾತ' ಕರ್ನಾಟಕದ ಮನೆ–ಮನಗಳ ಮಾತಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

80 ಕಲಾವಿದರು 15 ದಿನಗಳ ಕಾಲ ಖ್ಯಾತ ನಿರ್ದೇಶಕ ಬಿ.ಎಂ. ಗಿರಿರಾಜ್ ಅವರ ನಿರ್ದೇಶನದಲ್ಲಿ ರೂಪುಗೊಂಡಿರುವ ಈ ಕಾರ್ಯಕ್ರಮ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೈಲುಗಲ್ಲುಗಳಿಗೆ ಹಿಡಿದ ಕೈಗನ್ನಡಿಯಾಗಿದೆ.

ಪ್ರದರ್ಶನಕ್ಕಾಗಿ ಪ್ರತಿ ಜಿಲ್ಲೆಯಲ್ಲಿ 40–60 ಅಡಿ ಅಳತೆಯ ವೇದಿಕೆ ಹಾಗೂ 4 ರಿಂದ 5 ಸಾವಿರ ಜನ ಕುಳಿತು ವೀಕ್ಷಿಸಲು ಆಯಾ ಜಿಲ್ಲೆಗಳ ವಾರ್ತಾಧಿಕಾರಿಗಳು ಅಚ್ಚುಕಟ್ಟಾಗಿ ಮಾಡಿ ಪ್ರತಿ ಜಿಲ್ಲೆಯ ಸಾರ್ವಜನಿಕರಿಂದ ಹಾಗೂ ಜನಪ್ರತಿನಿಧಿಗಳಿಂದ ಜನಮನ್ನಣೆ ಗಳಿಸಿದ್ದಾರೆ.

## ಅನಿಸಿಕೆಗಳು:

ಜ್ಞಾನದ ಇನ್ನೊಂದು ಹೆಸರು ಡಾ.ಬಿ.ಆರ್.ಅಂಬೇಡ್ಕರ್, ಅವರ ಸಾಧನೆ ಮತ್ತು ಜೀವನ ಮನುಕುಲಕ್ಕೆ ಎಂದೆಂದಿಗೂ ಮಾದರಿ. ಇಂದಿನ ಯುವ ಜನತೆಗೆ ಅಂಬೇಡ್ಕರ್ ಅವರ ಸಾಧನೆ ಮತ್ತು ಜೀವನವನ್ನು ತೋರಿಸುವ ಈ ಬೃಹತ್ ಕಾರ್ಯಕ್ರಮ ಯಶಸ್ವಿಯಾಗಿರುವುದು ಸಂತಸ ತಂದಿದೆ.

ಎನ್.ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.

ಈ ಕಾರ್ಯಕ್ರಮದ ಮೊದಲ ಯಶಸ್ಸು ಸಮಿತಿ ಸದಸ್ಯರು, ತೆರೆಮರೆಯ ತಂಡ ಹಾಗೂ ಕಲಾವಿದರ ಆಯ್ಕೆ. ಉತ್ತಮ ತಂಡದ ಆಯ್ಕೆ ಕಾರ್ಯಕ್ರಮದ ಅರ್ಧ ಯಶಸ್ಸು. ಇಲಾಖೆಯ ಈ ಹಿಂದಿನ ಯಶಸ್ವಿ ಕಾರ್ಯಕ್ರಮ ಮನುಷ್ಯ ಜಾತಿ ತಾನೊಂದೆ ವಲಂ ಅನುಭವ ಇಂದು ಇದೆಕ್ಕೆಲ್ಲಾ ಕಾರಣವಾಗಿದೆ.

ಗುರುಮೂರ್ತಿ
ಜಂಟಿ ನಿರ್ದೇಶಕರು, ಕ್ಷೇತ್ರ ಪ್ರಚಾರ ಶಾಖೆ, ವಾ&ಸಾ.ಸಂ ಇಲಾಖೆ.

ಡಾ.ಬಿ.ಆರ್.ಅಂಬೇಡ್ಕರ್ ಎಂದರೆ ಸಂವಿಧಾನ ಶಿಲ್ಪಿ ಮತ್ತು ದಲಿತರ ಹಕ್ಕುಗಳ ಹೋರಾಟಗಾರ ಎಂದಷ್ಟೇ ಅಂದುಕೊಂಡಿದ್ದ ನನಗೆ ಅವರ ಬಹುಮುಖ ಪ್ರತಿಭೆಗಳ ಅನಾವರಣ ಈ ಕಾರ್ಯಕ್ರಮ, ಇಂತಹ ಕಾರ್ಯಕ್ರಮವನ್ನು ಸಿದ್ಧಪಡಿಸಿದ ತಂಡಕ್ಕೆ ಮತ್ತು ವಾರ್ತಾ ಇಲಾಖೆಗೆ ಅಭಿನಂದನೆಗಳು.

ಹೇಮಾಲತಾ ಬಿ
ಗೃಹಿಣಿ
ಮೈಸೂರು

ನಾನೂ ಕೂಡ ಬಹುತೇಕರಂತೆ ಸರ್ಕಾರಿ ಯೋಜನೆ, ಕಾರ್ಯಕ್ರಮಗಳ ಬಗೆಗೆ ಉಡಾಫೆ ಮತ್ತು ತಿರಸ್ಕಾರ ಭಾವ ಹೊಂದಿದವನಾಗಿದ್ದೆ, ಆದರೆ ಈ ಕಾರ್ಯಕ್ರಮಕ್ಕೆ ಕೆಲಸ ಮಾಡಿದ ನಂತರ ಸಮಾಜಮುಖಿಯಾಗಿ ಕೆಲಸ ಮಾಡಲು ನಿಶ್ಚಯಿಸಿದ್ದೇನೆ.

ಪೂರ್ಣಚಂದ್ರ ತೇಜಸ್ವಿ
ಸಂಗೀತ ನಿರ್ದೇಶಕ

ವಾರ್ತಾ ಇಲಾಖೆಯ ವಿಶುಕುಮಾರ್ ಸಾರ್ ಈ ಕಾರ್ಯಕ್ರಮದ ನಿರ್ದೇಶನದ ಜವಾಬ್ದಾರಿಯನ್ನು ನನಗೆ ವಹಿಸಿದಾಗ ಹೆಮ್ಮೆಯಿಂದ ಒಪ್ಪಿಕೊಂಡೆ, ಇಲಾಖೆ ಒದಗಿಸಿ ಕೊಟ್ಟ ಸಲಹಾ ಸಮಿತಿ, ತಜ್ಞರ ಸಮಿತಿ ಹಾಗೂ ನನ್ನ ಜೊತೆ ಹಗಲಿರುಳು ದುಡಿದ ತಂಡಕ್ಕೆ ಧನ್ಯವಾದಗಳು. ಈ ಕಾರ್ಯಕ್ರಮಕ್ಕೆ "ಭಾರತ ಭಾಗ್ಯ ವಿಧಾತ" ಹೆಸರು ಸೂಚಿಸಿದವರು ಖ್ಯಾತ ರಂಗಕರ್ಮಿ ಸಿ.ಬಸವಲಿಂಗಯ್ಯ ಅವರು.

ಗಿರಿರಾಜ್ ಬಿ.ಎಮ್
ರಂಗಭೂಮಿ ಹಾಗೂ ಚಲನಚಿತ್ರ ನಿರ್ದೇಶಕರು

ರಾಜ್ಯಾದ್ಯಂತ ಪ್ರದರ್ಶನಗೊಂಡ "ಭಾರತ ಭಾಗ್ಯ ವಿಧಾತ" ಕಾರ್ಯಕ್ರಮಗಳ ಪಟ್ಟಿ:

ಫೆಬ್ರವರಿ ತಿಂಗಳ 1 ರಂದು ಬೆಂಗಳೂರು ನಗರ ಫೆಬ್ರವರಿ 2 ರಂದು ರಾಮನಗರ, ಫೆಬ್ರವರಿ 3 ರಂದು ಮಂಡ್ಯ, ಫೆಬ್ರವರಿ 4 ರಂದು ಚಾಮರಾಜನಗರ, ಫೆಬ್ರವರಿ 5 ರಂದು ಮೈಸೂರು, ಫೆಬ್ರವರಿ 6 ರಂದು ಮಡಿಕೇರಿ, ಫೆಬ್ರವರಿ 7 ರಂದು ಹಾಸನ, ಫೆಬ್ರವರಿ 8 ರಂದು ಚಿಕ್ಕಮಗಳೂರು, ಪೆಬ್ರವರಿ 9 ರಂದು ಮಂಗಳೂರು, ಫೆಬ್ರವರಿ 10 ರಂದು ಉಡುಪಿ, ಫೆಬ್ರವರಿ 11 ರಂದು ಶಿವಮೊಗ್ಗ ಹಾಗೂ ಫೆಬ್ರವರಿ 12 ರಂದು ದಾವಣಗೆರೆ, ಫೆಬ್ರವರಿ 14 ರಂದು ಹಾವೇರಿ, ಫೆಬ್ರವರಿ 15 ರಂದು ಉತ್ತರಕನ್ನಡ-ಕಾರವಾರ, ಫೆಬ್ರವರಿ 16 ರಂದು ಬೆಳಗಾವಿ, ಫೆಬ್ರವರಿ 17 ರಂದು ಹುಬ್ಬಳ್ಳಿ-ಧಾರವಾಡ, ಫೆಬ್ರವರಿ 18 ರಂದು ಗದಗ, ಫೆಬ್ರವರಿ 19 ರಂದು ಬಾಗಲಕೋಟೆ, ಫೆಬ್ರವರಿ 20 ರಂದು ವಿಜಯಪುರ, ಫೆಬ್ರವರಿ 21ರಂದು ಕಲಬುರಗಿ, ಫೆಬ್ರವರಿ 22 ರಂದು ಬೀದರ್, ಫೆಬ್ರವರಿ 24 ರಂದು ಯಾದಗಿರಿ, ಫೆಬ್ರವರಿ 25 ರಂದು ರಾಯಚೂರು, ಫೆಬ್ರವರಿ 26 ರಂದು ಕೊಪ್ಪಳ, ಫೆಬ್ರವರಿ 27 ರಂದು ಬಳ್ಳಾರಿ, ಫೆಬ್ರವರಿ 28 ರಂದು ಚಿತ್ರದುರ್ಗ, ಮಾರ್ಚ್ 1 ರಂದು ತುಮಕೂರು, ಮಾರ್ಚ್ 2 ರಂದು ಚಿಕ್ಕಬಳ್ಳಾಪುರ, ಮಾರ್ಚ್ 3 ರಂದು ಕೋಲಾರದಲ್ಲಿ ಪ್ರದರ್ಶನ ನಡೆದಿದೆ.

# ಪ್ರಶಸ್ತಿ ಪ್ರದಾನ ಸಮಾರಂಭ – 2016

ಬೆಂಗಳೂರು, ಮಾರ್ಚ್ 3 , (ಕರ್ನಾಟಕ ವಾರ್ತೆ)

ಕರ್ನಾಟಕ ಮಾಧ್ಯಮ ಅಕಾಡೆಮಿ 2016 ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪುರಸ್ಕೃತರ ಪ್ರಧಾನ ಸಮಾರಂಭವನ್ನು ಮಾರ್ಚ್ 11 ರಂದು ಸಂಜೆ 5.00 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ. ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ ಡಾ. ಎಚ್. ಸಿ. ಮಹದೇವಪ್ಪ ಅವರು ಪ್ರಶಸ್ತಿ ಪುರಸ್ಕೃತರ ಪರಿಚಯ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್ ಅವರು ವಹಿಸಲಿದ್ದಾರೆ. ಸಮಾರಂಭದಲ್ಲಿ ಸಚಿವ ಸಂಪುಟದ ಅನೇಕ ಸದಸ್ಯರು ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಜೆಡಿ//ಜಿಪಿಅರ್/ಕೆಎಂ

# 125 ಚಲನಚಿತ್ರಗಳಿಗೆ ಸಹಾಯಧನ ಹೆಚ್ಚಳ

ಬೆಂಗಳೂರು, ಮಾರ್ಚ್ 3 , (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಕನ್ನಡ ಚಿತ್ರೋದ್ಯಮದ ಬೆಳವಣಿಗೆಗೆ ಹಲವಾರು ಯೋಜನೆಗಳ ಮೂಲಕ ಪ್ರೋತ್ಸಾಹ ನೀಡುತ್ತಿರುವ ಸರ್ಕಾರ ಪ್ರಸ್ತುತ 100 ಗುಣಾತ್ಮಕ ಕನ್ನಡ ಚಲನಚಿತ್ರಗಳಿಗೆ ನೀಡಲಾಗುತ್ತಿರುವ ಸಹಾಯಧನ ಸೌಲಭ್ಯವನ್ನು 125 ಚಿತ್ರಗಳಿಗೆ ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದೆ.

2016 ನೇ ಕ್ಯಾಲೆಂಡರ್ ವರ್ಷದಿಂದ ಜಾರಿಗೆ ಬರುವಂತೆ 100 ರಿಂದ 125 ಚಲನಚಿತ್ರಗಳಿಗೆ ಹೆಚ್ಚಿಸಿ ಮಂಜೂರಾತಿ ನೀಡಲಾಗಿದೆ.

ಎಂಆರ್‌ಎಂ/ಜಿಪಿಅರ್/ಕೆಎಂ

# ಭವಿಷ್ಯದ ಬೆಂಗಳೂರಿಗೆ ರಸ್ತೆಗಳ ಅಭಿವೃದ್ಧಿ ಮುಖ್ಯ –

– ಕೃಷಿ ಸಚಿವ ಕೃಷ್ಣಬೈರೇಗೌಡ

ಬೆಂಗಳೂರು, ಮಾರ್ಚ್ 3, (ಕರ್ನಾಟಕ ವಾರ್ತೆ)

ಭಾರತದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರ ವಿಶ್ವ ಭೂಪಟದಲ್ಲಿ ಗುರುತಿಸಿಕೊಂಡಿದೆ. ಈ ನಮ್ಮ ನಗರದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರತಿವರ್ಷ ಶೇ 20 ರಷ್ಟು ಬೆಳೆಯುತ್ತಿದ್ದು ಭವಿಷ್ಯದ ಬೆಂಗಳೂರಿಗೆ ಬೇಕಾಗುವ ರಸ್ತೆಗಳನ್ನು ನಮ್ಮ ಸರ್ಕಾರ ಈಗಲೇ ಅಭಿವೃದ್ಧಿಪಡಿಸುತ್ತಿದೆ ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತಲಿನ ರಸ್ತೆ ಅಭಿವೃದ್ಧಿ ಕಾಮಗಾರಿ ಶಿಲಾನ್ಯಾಸ ಹಾಗೂ ಸಾಂಕೇತಿಕ ಭೂ ಪರಿಹಾರ ವಿತರಣಾ ಕಾರ್ಯಕ್ರಮದ ಶಿಲಾನ್ಯಾಸ ನೆರವೇರಿಸಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಚಿವರು ಅಭಿವೃದ್ಧಿಗಿಂತ ಮುನ್ನ ಉತ್ತಮ ರಸ್ತೆಗಳನ್ನು ನಿರ್ಮಿಸುವುದು ಉತ್ತಮ, ಇಂದಿನ ಈ ರಸ್ತೆಗಳು ಮುಂದಿನ ಭವಿಷ್ಯದ ಅಭಿವೃದ್ಧಿಯ ಹಾದಿಗಳಾಗಿವೆ. ಭವಿಷ್ಯದಲ್ಲಿ ಬೆಂಗಳೂರಿನ ಈ ಭಾಗವು ಹೆಚ್ಚಿನ ಅಭಿವೃದ್ಧಿ ಕಾಣಲಿದೆ.

ಈ ಕಾಮಗಾರಿಗಾಗಿ ಜಮೀನುಗಳನ್ನು ಬಿಟ್ಟುಕೊಟ್ಟ ರೈತರಿಗೆ ಭೂ ಪರಿಹಾರವಾಗಿ ಒಟ್ಟು 65 ಕೋಟಿ ರೂ. ಗಳನ್ನು ಸರ್ಕಾರ ನೀಡಿದೆ. ಕರ್ನಾಟಕದಲ್ಲಿ ಈ ಭಾಗದ ರೈತರು ಅತಿ ಹೆಚ್ಚಿನ ಪರಿಹಾರ ಪಡೆದವರಾಗಿದ್ದಾರೆ. ಮೈಲನಹಳ್ಳಿಯಿಂದ ವಿಮಾನ ನಿಲ್ದಾಣಕ್ಕೆ 2 ಕಿ.ಮೀ. ಗಳ ಈ ಕಾಮಗಾರಿಗೆ 11.03 ಕೋಟಿ ರೂ. ಗಳನ್ನು ಮೀಸಲಿಡಲಾಗಿದೆ.

ಈ ವರ್ಷದಲ್ಲಿ ವಿಮಾನ ನಿಲ್ದಾಣಕ್ಕೆ ಮೆಟ್ರೋ ರೈಲು ಮಹತ್ವಕಾಂಕ್ಷೆ ಯೋಜನೆಯ ನೀಲಿ ನಕ್ಷೆಯನ್ನು ತಯಾರಿಸುವ ಗುರಿಹೊಂದಲಾಗಿದ್ದು, ಸರ್ಕಾರ ದೂರದೃಷ್ಟಿತನದಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಿದೆ. ಕೆಲವರು ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡುವುದು ಬೇಸರದ ಸಂಗತಿ ಎಂದು ಹೇಳಿದರು.

ಮತ್ತೊಂದು ಮುಖ್ಯ ಉಪರಸ್ತೆಯಾದ ಬೂದುಗೆರೆ ಕ್ರಾಸ್‌ನಿಂದ ಮಂಡೂರು ಮಾರ್ಗವಾಗಿ ಮೈಲನಹಳ್ಳಿ ತಲುಪುವ ರಸ್ತೆಯ ಕಾಮಗಾರಿಗೆ 259 ಕೋಟಿ ರೂ. ಮಂಜೂರಾತಿ ದೊರೆತಿದೆ. ಬೂದಿಗೆರೆ ಬೇಗೂರು ರಸ್ತೆ ಅಗಲೀಕರಣಕ್ಕಾಗಿ 27 ಕೋಟಿ ರೂ. ಮಂಜೂರಾಗಿದ್ದು, ಶೀಘ್ರದಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ.

ಈ ಭಾಗದಲ್ಲಿ ಈಗಾಗಲೇ ಇರುವ 3,000 ಎಕರೆಯಲ್ಲಿ ಅಭಿವೃದ್ಧಿಪಡಿಸಲಾಗಿರುವ ಕೈಗಾರಿಕಾ ಪ್ರದೇಶ ಉತ್ತಮ ರಸ್ತೆಗಳಿಂದ ಇನ್ನು ಹೆಚ್ಚಿನ ಕಂಪೆನಿಗಳನ್ನು ಆಕರ್ಷಿಸುವುದರಲ್ಲಿ ಸಂದೇಹವಿಲ್ಲ. ಮುಂದಿನ ಮೂರು ವರ್ಷದಲ್ಲಿ 10 ಲಕ್ಷಕ್ಕಿಂತ ಹೆಚ್ಚಿನ ಜನರು ಇಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನೆ ಸಚಿವ ಕೆ.ಜೆ. ಜಾರ್ಜ್ ಅವರು ಮಾತನಾಡಿ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ಉತ್ತಮ ರಸ್ತೆಗಳನ್ನು ನಿರ್ಮಿಸುವುದರ ಮೂಲಕ ಇತರ ರಾಜ್ಯಗಳಿಗೆ ಮಾದರಿಯಾಗಿದೆ.

ಅಭಿವೃದ್ಧಿ ಕಾರ್ಯಗಳಿಗೆ ಭೂಮಿ ನೀಡಿದ ರೈತರಿಗೆ ಉತ್ತಮ ಹಾಗೂ ತ್ವರಿತ ಪರಿಹಾರ ನೀಡುತ್ತಿದ್ದೇವೆ. ವೈಜ್ಞಾನಿಕ ರೀತಿಯಲ್ಲಿ ಬೆಂಗಳೂರಿನ ಕಸ ವಿಲೇವಾರಿಯನ್ನು ಮಾಡುತ್ತಿದ್ದೇವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಬೆಂಗಳೂರು ನಗರದ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕ ಪಿಳ್ಳಮುನಿಶಾಮಪ್ಪ ಹಾಗೂ ವಿಧಾನ ಪರಿಷತ್ ಸದಸ್ಯ ಎಂ. ನಾರಾಯಣ ಸ್ವಾಮಿ ಸೇರಿದಂತೆ ಸ್ಥಳೀಯ ಮುಖಂಡರುಗಳು ಉಪಸ್ಥಿರಿದ್ದರು.

# ಬೆಳ್ಳಿ ಮಾತು ಬೆಳ್ಳಿಸಿನಿಮಾ "ರಾಮಾ ರಾಮಾರೇ"

**ಬೆಂಗಳೂರು, ಮಾರ್ಚ್ 3, (ಕರ್ನಾಟಕ ವಾರ್ತೆ)**

ಕರ್ನಾಟಕ ಚಲನಚಿತ್ರ ಅಕಾಡೆಮಿವತಿಯಿಂದ ಮಾರ್ಚ್ 4 ರಂದು ಸಂಜೆ 4.00 ಗಂಟೆಗೆ ನಗರದ ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಬೆಳ್ಳಿ ಮಾತು ಬೆಳ್ಳಿ ಸಿನಿಮಾ ಕಾರ್ಯಕ್ರಮದಲ್ಲಿ ರಾಮಾ ರಾಮಾರೇ ಚಿತ್ರ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಚಿತ್ರದ ನಿರ್ದೇಶಕ ಡಿ. ಸತ್ಯಪ್ರಕಾಶ್ ಅವರೊಂದಿಗೆ ಸಂವಾದವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ಹಿರಿಯ ನಿರ್ದೇಶಕ ಎಸ್. ಮಹೇಂದರ್ ಅವರು ಪಾಲ್ಗೊಳ್ಳಲಿದ್ದು, ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಕೆಎನ್‌ಕೆ:ಜಿಪಿಆರ್.

**PHOTO CAPTION:**

**Public Relations Council of India 11th Global PR Conclave 2016 function.**

Chanchalpathidas Chairman Akshaya Patra, Anil Dharkar noted author and columnist Jayaram Chairman Emeritus. RT Kumar Chairman governing Council BN Kumar President. Mr. Kiran Kumar Chairman ISRO( left to right)

# ಶ್ರವಣದೋಷಿಗಳ ಒಳಿತಿಗಾಗಿ ಹೆಚ್ಚಿನ ಒತ್ತು ನೀಡಿ –

– ಸಚಿವ ರಮೇಶ್‌ಕುಮಾರ್

ಬೆಂಗಳೂರು, ಮಾರ್ಚ್ 3 , (ಕರ್ನಾಟಕ ವಾರ್ತೆ)

ಶ್ರವಣದೋಷಿಗಳ ಸಾಧನ ಸಲಕರಣಗಳ ವಿತರಣೆಯನ್ನು ಇನ್ನೂ ತ್ವರಿತಗತಿಯಲ್ಲಿ ಮಾಡಬೇಕಿರುವುದು ಅಧಿಕಾರಿಗಳ ಕರ್ತವ್ಯ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವ ಕೆ.ಆರ್.ರಮೇಶ್ ಕುಮಾರ್ ತಿಳಿಸಿದರು.

ಅವರು ಇಂದು ಹೆಬ್ಬಾಳದ ಸರ್ಕಾರಿ ಕ್ಷೇತ್ರೀಯ ಮಾದರಿ ಪ್ರಾಥಮಿಕ ಪಾಠಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ವಿಶ್ವ ಶ್ರವಣ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕದಲ್ಲಿ ಸುಮಾರು 33 ಲಕ್ಷ ಶ್ರವಣ ದೋಷಿಗಳಿದ್ದು, ಅದರಲ್ಲಿ 3 ಲಕ್ಷ ಮಕ್ಕಳಿದ್ದಾರೆ. ಆದರೆ ಕೇವಲ 1000 ಜನರಿಗೆ ಸಲವತ್ತುಗಳ ತಲುಪಿದ್ದು, ಇದು ತೃಪ್ತಿಕರವಾಗಿಲ್ಲ ಎಂದರು.

ಶ್ರವಣದೋಷದವರಿಗೆ ಶಿಕ್ಷಕರು, ಕುಟುಂಬ ವರ್ಗದವರು ಪ್ರೋತ್ಸಾಹ ನೀಡಿ ಅವರ ವಿಕಲತೆಯನ್ನು ಹೋಗಲಾಡಿಸಬೇಕು. ಇವರನ್ನು ಪೀಡಿಸುವುದಾಗಲಿ, ಅಂಗವಿಕಲತೆಯನ್ನು ವಿಜೃಂಭಿಸುವುದಾಗಲಿ ಮಾಡಬಾರದು. ಸರ್ಕಾರದ ವತಿಯಿಂದ ಸಹ ಇವರಿಗೆ ಯೋಜನೆಗಳನ್ನು ರೂಪಿಸುವುದಕ್ಕೆ ಹಣ ಮೀಸಲಿಡಲಾಗುವುದು ಎಂದರು.

ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿ ಮಾತನಾಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಸುಬೋಧ್ ಯಾದವ್, ಕರ್ನಾಟಕದಲ್ಲಿ ಸುಮಾರು 33 ಲಕ್ಷ ಜನ ಶ್ರವಣದೋಷದಿಂದ ಬಳಲುತ್ತಿದು, ಅದರ ಸಮಸ್ಯೆಯ ತೀವ್ರತೆಯ ಅನುಗುಣವಾಗಿ ಚಿಕಿತ್ಸೆ, ಸಾಧನ ಸಲಕರಣಗಳ ವಿತರಣೆ ಮಾಡಬೇಕಿದೆ. ಅವರಲ್ಲಿರುವ ದೋಷ ನಿವಾರಣೆಗೆ ಶ್ರಮಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಸಾಂಕೇತಿಕವಾಗಿ ಮಕ್ಕಳ ಶ್ರವಣ ಸಾಧನ–ಸಲಕರಣಗಳ ವಿತರಣೆ ಮಾಡಲಾಯಿತು. ಈ ಕ್ಷೇತ್ರದಲ್ಲಿ ಸಾಧನೆ ಮಾಡಲಾದ ಗಣ್ಯರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಕಾರ್ಪೋರೇಟರ್ ಗಣೇಶ್ ರಾವ್ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು.

ಕೆಎನ್‌ಕೆ/ಜೆಡಿ/ಜಿಪಿಅರ್

## ಅರ್ಜಿ ಆಹ್ವಾನ

ಬೆಂಗಳೂರು, ಮಾರ್ಚ್ 3 , (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 28-2-2017 ರಂದು ಸರ್ಕಾರದ ಅಬಕಾರಿ ಇಲಾಖೆಯಲ್ಲಿನ ಅಬಕಾರಿ ಉಪ ನಿರೀಕ್ಷಕರು/ಅಬಕಾರಿ ರಕ್ಷಕರು(ಪುರುಷ) ಮತ್ತು ಅಬಕಾರಿ ರಕ್ಷಕರು (ಮಹಿಳೆ) ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಗಾಗಿ ಹೊರಡಿಸಿದ್ದು, ದಿನಾಂಕ 1-3-2017 ರಿಂದ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಅಧಿಸೂಚನೆಯನ್ನು ಆಯೋಗದ ಅಂತರ್ಜಾಲ **http://kpsc.kar.nic.in/notification** ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.
ಕೆಎನ್‌ಕೆ/ಕೆಎಂ

## ಮುಖ್ಯಮಂತ್ರಿಗಳಿಂದ ಅರವತ್ತರ ವಸಂತ ಕೃತಿ ಬಿಡುಗಡೆ

ಬೆಂಗಳೂರು, ಮಾರ್ಚ್ 3 , (ಕರ್ನಾಟಕ ವಾರ್ತೆ)

ಕನ್ನಡ ಚಲನಚಿತ್ರ ರಂಗದ ಆರು ದಶಕಗಳ ಬೆಳವಣಿಗೆ ಕುರಿತಂತೆ ಅರವತ್ತರ ವಸಂತ ಎಂಬ ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂದು ಗೃಹ ಕಛೇರಿ ಕೃಷ್ಣಾದಲ್ಲಿ ಲೋಕಾರ್ಪಣೆ ಮಾಡಿದರು.

ಲೇಖಕ ಎನ್. ಜಗನ್ನಾಥ್ ಪ್ರಕಾಶ್ ಅವರು ಅರವತ್ತರ ವಸಂತ ಕೃತಿಯ ಲೇಖಕರು. ಸಮಾಜ ಕಲ್ಯಾಣ ಸಚಿವ ಸಚಿವ ಎಚ್. ಆಂಜನೇಯ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶುಕುಮಾರ್, ಸಂಗೀತ ನಿರ್ದೇಶಕ ಹಂಸಲೇಖ, ಹಂಪಿ ವಿಶ್ವವಿದ್ಯಾನಿಲಯದ ಉಪ ಕುಲಪತಿ ಶ್ರೀಮತಿ ಮಲ್ಲಿಕಾ ಘಂಟಿ, ಸಾಹಿತಿಗಳಾದ ಹಂಪಾ ನಾಗರಾಜಯ್ಯ, ಕಮಲಾ ಹಂಪನಾ, ಡಾ: ಸಿದ್ದಲಿಂಗಯ್ಯ, ಚಂದ್ರಶೇಖರ ಪಾಟೀಲ, ಕಾಳೇಗೌಡ

ನಾಗವಾರ ಹಾಗೂ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸಿದ್ದರಾಜು, ಮುಖ್ಯ ಮಂತ್ರಿಗಳ ಮಾಧ್ಯಮ ಸಮನ್ವಯಾಧಿಕಾರಿ ಪ್ರಭಾಕರ್  ಮತ್ತಿತರರು ಉಪಸ್ಥಿತರಿದ್ದರು.

ಕೆಎನ್‌ಕೆ/ಕೆಪಿಪಿ/ಕೆಎಂ